ಸಿ.ಸಿ. ನಂಬರ್‌ಃ**3052/2023**
ಸಿ.ಡಬ್ಲ್ಯೂಃ**5** ಪಿ.ಡಬ್ಲ್ಯೂಃ**1**

ಪ್ರಧಾನ ದಿವಾಣಿ ಹಾಗೂ ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ ಇವರ ನ್ಯಾಯಾಲಯದಲ್ಲಿ,

ಧಾರವಾಡ

ಸಿ.ಸಿ. ನಂಬರ್‌ಃ**3052/2023**

| | |
|---|---|
| ಸಾಕ್ಷಿಯ ಹೆಸರು | : ಲೋಕೇಶ |
| ತಂದೆಯ ಹೆಸರು | : ಮಾದೇವಪ್ಪ ಒಗ್ಗರ |
| ವಯಸ್ಸು | : 45 ವರ್ಷ |
| ಉದ್ಯೋಗ | : ಖಾಸಗಿ ಉದ್ಯೋಗ |
| ವಾಸಸ್ಥಳ | : ಸೈದಾಪುರ ಧಾರವಾಡ |

ದಿಃ **03-12-2025** ರಂದು ಸಾಕ್ಷಿಯನ್ನು ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ

ನನಗೆ ಚಾಸಾ.4 ರವರ ಪರಿಚಯವಿರುತ್ತದೆ. ಚಾಸಾ.1 ರವರ ಪರಿಚಯವಿರುವುದಿಲ್ಲ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರದಲ್ಲಿ ತಮ್ಮನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಸುಮಾರು ಎರಡು ವರ್ಷಗಳ ಹಿಂದೆ ಸದರಿ ಸಹಿಯನ್ನು ಪೆಟ್ರೋಲ್ ಬಂಕ ಹತ್ತಿರ ಇರುವ ನಾಯಕ ಹಡ್ಡಿ ಹತ್ತಿರ ಮಾಡಿರುತ್ತೇನೆ. ಸ್ಥಳವನ್ನು ಪೋಲಿಸರು ತೋರಿಸಿರುತ್ತಾರೆ. ಅವರ ಹೆಸರು ಗೊತ್ತಿರುವುದಿಲ್ಲ. ಸದರಿ ಸಮಯದಲ್ಲಿ ಚಾಸಾ.4 ಮತ್ತು ಪೋಲಿಸರು ಹಾಜರು ಇದ್ದರು. ಪಂಚನಾಮೆಯನ್ನು ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಾಡಿರುತ್ತಾರೆ.

ಸಿ.ಸಿ. ನಂಬರ್‌:**3052/2023**
ಸಿ.ಡಬ್ಲ್ಯೂ:**5** ಪಿ.ಡಬ್ಲ್ಯೂ:**1**

*(ಈ ಹಂತದಲ್ಲಿ ಮಾನ್ಯ ಸಸಅ ಅವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಲಾಯಿತು.)*

ಪಾಟೀಸವಾಲುಃ ಶ್ರೀ.ಸ.ಸ.ಅ. ಅವರಿಂದಃ

ದಿಃ 19-06-2022 ರಂದು ನನ್ನ ಹಾಗೂ ಚಾಸಾ.4 ರವರ ಸಮಕ್ಷಮ ಚಾಸಾ.1 ರವರು ತೋರಿಸಿರುವ ಜಾಗದಲ್ಲಿ ಪೋಲಿಸರು ನಿಪಿ.1 ರಂತೆ ಪಂಚನಾಮೆ ಮಾಡಿದ್ದರು ಎಂದರೆ ಸರಿ. ನಿಪಿ.1 ಓದಿ ಹೇಳಿದರು, ಆ ನಂತರ ಸಹಿ ಮಾಡಿದೆನು ಎಂದರೆ ಸರಿ.

ಪಾಟೀಸವಾಲುಃ ಆರೋಪಿ ನಂ.**10** ಪರ ವಕೀಲರಿಂದ

ನಮ್ಮ ಮನೆಯು ಓಲ್ಡ ಎಸ್ ಪಿ ಹತ್ತಿರ ಇರುತ್ತದೆ. ನಮ್ಮ ಮನೆಯು ಉಪನಗರ ಠಾಣೆಯ ಹತ್ತಿರ ಇರುತ್ತದೆ ಎಂದರೆ ಸರಿ. ಪಂಚನಾಮೆಗೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚನಾಮೆಯ ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ನಾನು ಪಂಚನಾಮೆಗೆ ಸಹಿ ಮಾಡಿದ್ದೇನೆ ಹಾಗೂ ಓದಿ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ **1** ರಿಂದ **9** ನೇ ಆರೋಪಿ ಪರ ವಕೀಲರು ಆರೋಪಿ ನಂ. **10** ರವರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆಃ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.**)**

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.